767 (928) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) –ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದ ಮುಜರಾಯಿ ದೇವಾಲಯಗಳಲ್ಲಿ ಸಂಸ್ಕೃತ ಪಾಠಶಾಲೆ ಮತ್ತು ಭಜನೆ ಕೇಂದ್ರಗಳನ್ನು ತೆರೆಯಲು ಚಿಂತನೆ ಸರ್ಕಾರಕ್ಕಿದೆಯೇ ,

(ಆ) ಹಾಗಿದ್ದಲ್ಲಿ ರಾಜ್ಯದ ಯಾವ ಯಾವ ದೇವಾಲಯಗಳಲ್ಲಿ ತೆರೆಯಲಾಗುವುದು , ಇದಕ್ಕೆ ತರಬೇತಿದಾರರ ನೇಮಕಾತಿ ಹಾಗೂ ವಿದ್ಯಾರ್ಥಿಗಳ ಪ್ರವೇಶದ ನಿಯಮಗಳೇನು , (ಪೂರ್ಣ ವಿವರ ನೀಡುವುದು)

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು) –

(ಅ) ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಮುಜರಾಯಿ ದೇವಾಲಯಗಳಲ್ಲಿ ಸಂಸ್ಕೃತ ಪಾಠಶಾಲೆ ಮತ್ತು ಭಜನಾ ಕೇಂದ್ರಗಳನ್ನು ತೆರೆಯುವ ಚಿಂತನೆಯು ಸದ್ಯಕ್ಕೆ ಸರ್ಕಾರಕ್ಕೆ ಇರುವುದಿಲ್ಲ

(ಆ) ಮೇಲಿನ ಕಾರಣದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

768 (929) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) –ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಸರ್ಕಾರದ ಎತ್ತು–ಬಂಡಿ ಯೋಜನೆಯಿಂದ ಯಾವ ಯಾವ ರೈತರಿಗೆ ಅನುಕೂಲವಾಗಲಿದೆ ,

(ಆ) ಈ ಯೋಜನೆಯನ್ವಯ ಬಂಡಿಗೆ ಹಾಗೂ ಎತ್ತಿಗೆ ಸಬ್ಸಿಡಿ ಹಣ ನೀಡುವುದೆಷ್ಟು ,

(ಇ) ಕಳೆದ ವರ್ಷದಲ್ಲಿ ಕಾರ್ಕಳ ತಾಲ್ಲೂಕಿನ ಎಷ್ಟು ರೈತರು ಈ ಯೋಜನೆಯ ಉಪಯೋಗ ಪಡೆದಿದ್ದಾರೆ,

(ಈ) ಎತ್ತು ಪಡೆದ ಫಲಾನುಭವಿಗಳಿಗೆ, ರಿಯಾಯಿತಿ ದರದಲ್ಲಿ ಬಂಡಿ ನೀಡದೆ ಇರುವುದು ಹಾಗೂ ಬಂಡಿ ನೀಡಿದ ಫಲಾನುಭವಿಗಳಿಗೆ ಎತ್ತು ಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

(ಉ) ಕಳೆದ ಹಾಗೂ ಪ್ರಸ್ತುತ ಸಾಲಿನಲ್ಲಿ ಈ ಯೋಜನೆಗಾಗಿ ಬಿಡುಗಡೆ ಮಾಡಿದ ಅನುದಾನವೆಷ್ಟು, (ವಿವರ ನೀಡುವುದು) ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) –

(ಅ) ಈ ಯೋಜನೆಯಿಂದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುಕೂಲವಾಗಿದೆ

(ಅ) ಮತ್ತು (ಆ) ಒಂದು ಜೊತೆ ಎತ್ತು/ಕೋಣ ಶೇ 50%–ಗರಿಷ್ಠ ರೂ 10,000

ಬಂಡಿ ಶೇ 50%–ಗರಿಷ್ಠ ರೂ 10,000

(ಇ) ಯಾರೂ ಇಲ್ಲ

(ಈ) ಹೌದು, ಒಬ್ಬ ಫಲಾನುಭವಿಗೆ ಎತ್ತು ಅಥವಾ ಎತ್ತಿನ ಗಾಡಿ ಇವುಗಳಲ್ಲಿ ಯಾವುದಾದರೊಂದನ್ನು ನೀಡಲಾಗಿದೆ

(ಉ) 2006–07 ರೂ 2000 00 ಲಕ್ಷಗಳು, 2007–08 ರೂ 5000 00 ಲಕ್ಷಗಳು

769 (301) ಶ್ರೀ ಸುರೇಶ್ ಎಸ್ ಮಾರಿಹಾಳ (ಕಿತ್ತೂರು) –ಕಂದಾಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) 2007–08 ನೇ ಆಯವ್ಯಯದಲ್ಲಿ ಎಂ–ಕೆ ಹುಬ್ಬಳ್ಳಿ ಹತ್ತಿರ ಮಲಪ್ರಭ ನದಿಯಲ್ಲಿರುವ ಗಂಗಾಂಬಿಕಾ ದೇವಸ್ಥಾನ ಅಭಿವೃದ್ಧಿಗೆ ಘೋಷಣೆ ಮಾಡಿದ್ದು ಸರಕಾರದ ಗಮನಕ್ಕೆ ಬಂದಿದೆಯೇ,

(ಆ) ಬಂದಿದ್ದಲ್ಲಿ, ಕಾಮಗಾರಿ ಯಾವಾಗ ಪ್ರಾರಂಭ ಮಾಡಲಾಗುವುದು,

(ಇ) ಈ ಕಾಮಗಾರಿಯ ಅಂದಾಜು ವೆಚ್ಚ ಹಾಗೂ ರೂಪರೇಷೆಗಳ ಬಗ್ಗೆ ಮಾಹಿತಿ ನೀಡುವುದು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) –

(ಅ) ಬಂದಿದೆ

(ಆ) ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಅಂತಿಮಗೊಂಡ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು

(ಇ) ಮೊದಲ ಹಂತದ ಕಾಮಗಾರಿಯ ಅಂದಾಜು ವೆಚ್ಚ ರೂ 3,47,60,000/– ಈ ಹಂತದಲ್ಲಿ ಕೆಳಕಂಡ ಕಾಮಗಾರಿಗಳು ಒಳಗೊಂಡಿವೆ,–

(1) ಮೂಲ ದೇವಸ್ಥಾನದ ಪುನರ್ ನಿರ್ಮಾಣ ಹಾಗೂ ಅದರ ಸಂರಕ್ಷಣೆ ಮತ್ತು ಸೌಂದರೀಕರಣಗೊಳಿಸುವುದು

(2) ದೇವಸ್ಥಾನದ ಸುತ್ತಲೂ ವರ್ತುಲಾಕಾರದಲ್ಲಿ ಆರ್‌ಸಿಸಿ ಗೋಡೆ ನಿರ್ಮಿಸುವುದು

(3) ದೇವಸ್ಥಾನಕ್ಕೆ ಹೋಗಲು ಉತ್ತರ ದಿಕ್ಕಿನಲ್ಲಿ ಸಂಪರ್ಕ ಸೇತುವೆ ನಿರ್ಮಾಣ ಮಾಡುವುದು